ಈ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್‌ಗೆ ಸೇರಿರುವ ಅಣೆಕಟ್ಟುಗಳ ಸಂಖ್ಯೆ ಎಷ್ಟು ?

ಉ) ನಾದುರಸ್ತಿಯಾದ ಅಣೆಕಟ್ಟುಗಳಿಗೆ ರಿಪೇರಿ ಮಾಡಲು ೧೯೮೬ ರಿಂದ ೧೯೮೯ರ ತನಕ ಬಿಡುಗಡೆ ಮಾಡಲಾದ ಹಣವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ೩೮೬.

ಆ) ೧೯೦.

ಇ) ೮.

ಈ) ೩೭೮.

ಉ) ೧೯೮೬–೮೭ ೧೧.೮೮ ಲಕ್ಷ ರೂ.ಗಳು.
೧೯೮೭–೮೮ ೧೪.೦೨ ಲಕ್ಷ ರೂ ಗಳು.
೧೯೮೮–೮೯ ೧೫.೦೩ ಲಕ್ಷ ರೂ.ಗಳು.

ಶ್ರೀ ಜಿ. ಎಸ್. ಆಚಾರ್ (ಶ್ರೀ ವಸಂತ ಸಾಲಿಯಾನ ಅವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟ ಉತ್ತರದಲ್ಲಿ ೩೮೬ ಅಣ್ಣೆಕಟ್ಟುಗಳಲ್ಲಿ ೧೯೦ಅಣೆಕಟ್ಟುಗಳು ನಾದುರಸ್ತಿಯಲ್ಲಿವೆ ಅಂದರೆ ಶೇಕಡ ೫೦ರಷ್ಟು ನಾದರಸ್ತಿಯಲ್ಲಿವೆ ಎಂದೆ ಹಾಗಾಯಿತು. ಅದೇ ರೀತಿ ನೀರಾವರಿ ಇಲಾಖೆಯಲ್ಲಿ ಪೂರ್ತಿ ನಾದರಸ್ತಿಯಲ್ಲಿದೆ. ಈ ಅಣೆಕಟ್ಟುಗಳಿಗೆ ಮೂರು ವರ್ಷದಿಂದ ಬಿಡುಗಡೆ ಮಾಡಿರುವ ಹಣ ೪೦.೫೩ ಲಕ್ಷ ರೂಪಾಯಿಗಳು. ಇಷ್ಟು ಹಣ ಬಿಡುಗಡೆಯಾಗಿದ್ದರೂ ಆ ಹಣವನ್ನು ಪೂರ್ತಿ ಖರ್ಚು ಮಾಡಲಾಗಿದೆಯೆ ? ನಮಗೆ ತಿಳಿದಹಾಗೆ ಖರ್ಚಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಗಾಲ ಬರುವುದರಿಂದ ಫೆಬ್ರವರಿ ಮಾರ್ಚಿಯಲ್ಲಿ ಹಣ ಬಿಡುಗಡೆಯಾದರೆ ಹಣ ಖರ್ಚಾಗುವುದಿಲ್ಲ ಉಡುಪಿಯಲ್ಲಿ ೬೧ ಅಣೆಕಟ್ಟಿಗೆ ೬೧ ಸಾವಿರ ರೂಪಾಯಿ ಮಾತ್ರ ಬಿಡುಗಡೆಯಾಗಿದೆ. ಕುಂದಾಪುರದಲ್ಲಿ ೭೦ ಅಣೆಕಟ್ಟಿಗೆ ೫೧ ಸಾವಿರ ರೂಪಾಯಿ ಬಿಡುಗಡೆಯಾಗಿದೆ ಎಂದು ಅಲ್ಲಿನ ಶಾಸಕರು ಹೇಳಿದ್ದಾರೆ. ಕೆಲವೇ ವರ್ಷಗಳ ಹಿಂದೆ ರಚಿತವಾದ ನೀರಾವರಿ ಕಾಮಗಾರಿಗಳು ಇಷ್ಟು ಬೇಗ ಹಾಳಾಗುವುದಕ್ಕೆ ಕಾರಣ ಏನು ? ಉದಾಹರಣೆಗೆ ಕೊಕ್ಕಾಡಿ ಅಣೆಕಟ್ಟು, ಕುಂದಾಪುರ ತಾಲ್ಲೂಕಿನ ಸೌಕೂರು ಅಣೆಕಟ್ಟು ಇವುಗಳನ್ನು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕಟ್ಟಿದ್ದರೂ ಪೂರ್ತಿಯಾಗಿ ಹಾಳಾಗಿವೆ. ಸರ್ಕಾರದ ಆಸ್ತಿ ಇದು. ಆದ್ದರಿಂದ ಈ ನೀರಾವರಿ ಯೋಜನೆಗಳನ್ನು ಉಳಿಸಿಕೊಳ್ಳುವುದಕ್ಕೆ ಸರ್ವೇ ಮಾಡುತ್ತಿದ್ದಾರೆಯೆ ? ಪೂರ್ತಿ ಹಣವನ್ನು ಸರ್ಕಾರ ಒದಗಿಸುತ್ತದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾದುರಸ್ತಿಯಾದ ಅಣೆಕಟ್ಟುಗಳ ರಿಪೇರಿಗೆ ೧೯೮೬–೮೭ರಲ್ಲಿ ೧೧,೮೮ ೦೭೦ ರೂಪಾಯಿ ಕೊಟ್ಟಿದ್ದು ೧೮, ೩೯,೦೦೦ ರೂಪಾಯಿ ವೆಚ್ಚವಾಗಿದೆ. ೧೯೮೭–೮೮ರಲ್ಲಿ ೧೧ ಲಕ್ಷ ಕೊಟ್ಟಿದ್ದರೆ ೧೧ ಲಕ್ಷ ೪೦ ಸಾವಿರ ರೂಪಾಯಿ ಖರ್ಚಾಗಿದೆ. ೧೯೮೮ರಲ್ಲಿ ೧೪ ಲಕ್ಷ ರೂಪಾಯಿ ಖರ್ಚಾಗಿದೆ. ಒದಗಿಸಿದ ಹಣ ಖರ್ಚಾಗುತ್ತಿದೆ. ಹೆಚ್ಚು ಹಣ ಒದಗಿಸಬೇಕೆಂದು ಸದಸ್ಯರು ಹೇಳಿದ್ದಾರೆ. ಅದಕ್ಕೆ ಪ್ರಯತ್ನ ಮಾಡುತ್ತೇನೆ.

ತುಂಗಾ ಮೇಲ್ದಂಡೆ ಯೋಜನೆ.

೫೬೬. ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ ಕೇಂದ್ರ ಸರ್ಕಾರದ ಅನುಮೋದನೆ ಪಡೆಯುವಲ್ಲಿ ವಿನಾ ಕಾರಣ ವಿಳಂಬವಾಗುತ್ತಿರಲು ಕಾರಣವೇನು ?

ಆ) ೧೯೮೯–೯೦ನೇ ವರ್ಷದಿಂದಲಾದರೂ ಈ ಯೋಜನೆಯ ಕಾರ್ಯವನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದೇ ?

ಇ) ಇದುವರೆವಿಗೂ ಈ ಯೋಜನೆಗೆ ಸರ್ಕಾರವು ಖರ್ಚು ಮಾಡಿರುವ ಮೊಬಲಗೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ತುಂಗಾ ಮೇಲ್ದಂಡೆ ಯೋಜನೆಯ ಪರ್ಯಾಯ ಪ್ರಸ್ತಾವಗಳು ಅನ್ವೇಷಣೆಯಲ್ಲಿರುವುದರಿಂದ, ಯೋಜನೆಯ ವರದಿಯನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿಲ್ಲ.

ಆ) ಯೋಜನಾ ವರದಿಗೆ ಮಂಜೂರಾತಿ ದೊರೆತ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಅನ್ವೇಷಣೆ ಮತ್ತು ಯೋಜನಾ ವರದಿಯನ್ನು ತಯಾರಿಸಲು ಇದುವರೆವಿಗೂ ೪,೭೨,೧೩೧ ರೂ.ಗಳು ವೆಚ್ಚವಾಗಿದೆ.

ಈಗ ಅನ್ವೇಷಣೆ ಕಾರ್ಯಮುಗಿದಿದೆ. ಇದು ಟೆಕ್ನಿಕಲ್ ಕಮಿಟಿಯ ಮುಂದೆ ಬರುತ್ತಿದೆ. ಇನ್ನು ೨-೩ ತಿಂಗಳಲ್ಲಿ ಅಲ್ಲಿ ಒಪ್ಪಿಗೆ ಪಡೆದ ಮೇಲೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ. ಈ ಕೆಲಸಕ್ಕೆ ಹೆಚ್ಚಿನ ಹಣವನ್ನು ಒದಗಿಸಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಜಿ. ಬಸವನ ಗೌಡ.—ಈ ಬಗ್ಗೆ ನನ್ನ ಅನೇಕ ಶಾಸಕ ಮಿತ್ರರುಗಳು ಕೂಡ ಕಳೆದ ೬ ವರ್ಷಗಳಿಂದ ಈ ಯೋಜನೆಯನ್ನು ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಒತ್ತಾಯ ತರುತ್ತಿದ್ದಾರೆ. ಎರಡು-ಮೂರು ವರ್ಷಗಳ ಹಿಂದೆ, ಹಿಂದಿನ ನೀರಾವರಿ ಸಚಿವರು ಈ ವರ್ಷ ಈ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆಂಬ ಆಶ್ವಾಸನೆ ಕೊಟ್ಟಿದ್ದರು. ನಮ್ಮ ರಾಜ್ಯದಲ್ಲಿ ಸುಮಾರು ೪೮ ನೀರಾವರಿ ಯೋಜನೆಗಳಲ್ಲಿ ೨೨ ಯೋಜನೆಗಳನ್ನು ಕೇಂದ್ರ ಸರ್ಕಾರದ ಅನುಮತಿಯನ್ನು, ನಿರೀಕ್ಷಣೆ ಮಾಡಿ ತೆಗೆದುಕೊಂಡಿದ್ದೇವೆ. ಅದೇ ಪ್ರಕಾರ ಈ ಯೋಜನೆಯನ್ನು ಕೇಂದ್ರ ಸರ್ಕಾರದ ಅನುಮತಿಯ ನಿರೀಕ್ಷಣೆಯ ಮೇಲೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ,

" Pending approval by the Central Government, You can take the work-"

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಯೋಜನೆಯನ್ನು ಒನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿತ್ತು. ಟೆಕ್ನಿಕಲ್ ಕಮಿಟಿಯ ಅಪ್ರೂವಲ್ ಮಾಡಿದ ಮೇಲೆ ವಿಶೇಷವಾಗಿ ಹಣಕೊಟ್ಟು ಮಂಜೂರಾತಿ ಪಡೆಯಬೇಕಾಗಿದೆ. ಈ ಯೋಜನೆಗೆ ಮಂಜೂರಾತಿ ಪಡೆಯಲು ಪ್ರಯತ್ನ ಮಾಡುತ್ತೇವೆ. ಈ ವರ್ಷವೇ ಮಂಜೂರಾತಿ ಸಿಕ್ಕಿದರೆ ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ಜಿ. ಬಸವನ ಗೌಡ.—ಇದು ತಪ್ಪುಗೂ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರಕ್ಕೆ ಸೇರಿದ ಕೆಲವು ತಾಲ್ಲೂಕುಗಳಿಗೆ ಸಂಬಂಧಪಟ್ಟಿದ್ದಾಗಿದೆ. ತಮ್ಮ ಮುಖ್ಯಮಂತ್ರಿಗಳ ಅವಧಿಯಲ್ಲಿ ತಾವು ಈ ಯೋಜನೆಯನ್ನು ಶುರು ಮಾಡುತ್ತೀರಾ ?

ಅಧ್ಯಕ್ಷರು.—ಆದಷ್ಟು ಬೇಗ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕೆಂದು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಇಡೀ ರಾಜ್ಯಕ್ಕೆ ಮುಖ್ಯಮಂತ್ರಿಯಾಗಿ ಕೆಲಸ ಮಾಡಬೇಕಾಗಿದೆ. ಆದರೂ ನನ್ನ ಜಿಲ್ಲೆಗೆ ಹೆಚ್ಚು ಆಸ್ಥೆ ವಹಿಸುವುದು ಸ್ವಾಭಾವಿಕ. ಟೆಕ್ನಿಕಲ್ ಕಮಿಟಿ ಮಂಜೂರು ಮಾಡಿದ ಕೂಡಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಒಪ್ಪಿಗೆ ಪಡೆಯತಕ್ಕ ಪ್ರಯತ್ನ ಮಾಡುತ್ತೇನೆ.

Damages Caused to the Life and Properties due to rains havoc in Bidar District

(391) SRI MOHAMED LAIQUDDIN (Bidar).—Will the Minister for Revenue be pleased to state :—

a) the total extent of damages caused to life and properties duting the last years rains havoc in Bidar District;

b) No.of families provided with ex-gratia amount due to death of their family members and the rate of ex-gratia amount paid to the each family :

C) whether any relief is given to the farmres and other persons who have suffered losses due to houses collapse or house damage and destruction of crops etc;